ಗೋವಿಂದನಹಳ್ಳೀಲಿ ವಾಸಸ್ಥನಾಗಿ ಮೃತಪಟ್ಟ ಪುಟ್ಟಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಮೃತಪಟ್ಟ ಪುಟ್ಟಣ್ಣನಿಗೂ, ಅರ್ಜೀದಾರಳಿಗೂ, ಹಿಸ್ಸೆ ಆದ್ದರಲ್ಲಿ ಮೈನರೀಗೋಸ್ಕರ ಅರ್ಜೀದಾರಳ ಹಿಸ್ಸೆಗೆ ಪುಟ್ಟಣ್ಣನ ಹೆಸರಿನ ಲೇವಾದೇವಿ ಬಾಬತು (500) ರೂಪಾಯಿ ಬಂದು ಶಾರಿ ಖತ್ತು ಹುಟ್ಟಿರುತ್ತೆ. ಆ ಬಾಬತು ಮೊಬಲಗು ವಸೂಲ್‌ಮಾಡಿಕ್ಕೊಳ್ಳತಕ್ಕ ಬಗ್ಯೆ 500 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವ ದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಭದ್ರಂಮನ, ಅರ್ಜೀಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 72.

ಮೃತಪಟ್ಟ ಚಿಕ್ಕೇಗೌಡ ವುರಫ್ ಕರಿಗೌಡನ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ದೇವಾ ಮೈನರ್ ಗಾರ್ಡಿಯರ್ನ್ ಬೋರೆಗೌಡನು, ಮೃತಪಟ್ಟ ಸದರೀ ಚಿಕ್ಕೇಗೌಡ ವುರಫ್ ಕರೀಗೌಡನಿಗೆ ದತ್ತುಮಗ ಮೈನರಿ ಸಬಬು ಇವನ ಸೋದರಮಾವ ಬೋರೆಗೌಡನ ಮಗ ಬೋರೆಗೌಡ ಮೈಸೂರು ತಾಲ್ಲೂಕು ನಾಗನಹಳ್ಳಿ ಸ್ಥಳದ ಸದರೀಬೋರೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟ ಚಿಕ್ಕೇಗೌಡನ ಜಿಂದಗೀಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬೋರೆಗೌಡನ ಅರ್ಜೀಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 3ರಲ್ಲುಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕೇಗೌಡ ವುರಫ್ ಕರಿಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಫಿಬ್ರವರೀ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಎಸ್. ಹೇವಾಜಿರಾವ್, ಡಿಸ್ಟ್ರಿಕ್ಟು ಜಡ್ಜ್.

ತಾರೀಖು 3ನೇ ಫಿಬ್ರವರೀ 1887.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ನ 1887ನೇ ಇಸವಿ ಏಪ್ರೆಲ್ ಗರ್ಸ್ಟೀ ತಾರೀಖು ಮೊದಲು 1888ನ್ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಕೆಲಸಿ ಜೀಕಾದ ಆಹಾರ ವಸ್ತೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್‌ಟೆಂಡೆಂಟರವರು ಸ್ನ 1837ನೇ ಇಸವಿ ಮಾರ್ಚೆ 15ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ಮೇಲ್ಕಂಡ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ $7\frac{1}{2}$ ಘಂಟೆಗೆ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು. ಯಾವವೆಂದರೆ:—

ನೇಟಿವ್ ಕೂಲೀಯವರಾದ ಗಂಡಸರು	..	..	..	A ಕ್ಲಾಸ್*
ಡಿಟೋ	ಡಿಟೋ	..	..	B ,,
ಡಿಟೋ	ಡಿಟೋ	..	..	C ,,
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು ಮತ್ತು ವಿಚಾರಣೆಯಲ್ಲಿ ಇರತಕ್ಕವರು	..	..	..	D ,,

*ಆಹಾರ ಜಿನಸಿಗಳಲ್ಲಿ ಮಾಂಸ ಸಹಾ ಶೇರಿರುವ ಸಂದರ್ಭಗಳಲ್ಲಿ, ಪ್ರತಿ ಇಸಮಿಗೂ ಸಲ್ಲುವ ಲವನಸಿನೊಳಗೆ ಎಲಬು ವಿನಾಯಿನ ತಕ್ಕದ್ದು. ಯೂರೋಪಿಯರ್ಸ್‌ಗಳು ವ ಈಸ್ಟ್ ಇಂಡಿಯರ್ಸ್‌ಗಳಿಗೆ ರಾಗಿ ಸಹಿತ ಆಸಪತ್ರಿ ಪಥ್ಯದ ಆಹಾರ ಅಕ್ಕಿ ಸಹಿತ ಆಸಪತ್ರಿ ಪಥ್ಯದ ಆಹಾರ.

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್‌ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಸ್ಕೇಲ್ ಪಟ್ಟೀ ಪ್ರಕಾರ ಆಸಪತ್ರಿ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದಯಂತೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡುವ ಬಗ್ಯೆ ಶೀಗೇಕಾಯಿ, ತಮಾಂ ತಾಂಬ್ರಪಾತ್ರೆಗಳ ರಿಪೇರಿ ವ ಕಲಾಯಿ ಮಾಡುವಣ, ಪರಕೆಗಳು, ಪಾಯಖಾನೆ ಗೂಡಿ, ಮಡಿಕೆ ಸುಡುವ ಬಗ್ಯೆ ಸೌದಿ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು ರೊಟ್ಟಿ, ಸಕ್ಕರೆ ವಗೈರೆ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಜವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡುವ ಬಟ್ಟೆ ಸಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್‌ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವೈಸಿ ಕೊಂಡಿರುತ್ತಾರೆ ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟು ತಾರೀಖು ಮೊದಲು ಒಂದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಆದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ.. ರಾಗಿ ಮತ್ತು ಬೇಳೆ ಮುಂತಾದ್ದು ಮಾಡಲ್ಪಟ್ಟು ತವಡು ಇಲ್ಲದೇ ಇರಬೇಕು. ಸರಬರಾಯಿ ಮಾಡುವದಕ್ಕೆ ಮುಂಚಿತವಾಗಿಯೇ ಮೆಣಸಿನಕಾಯಿ ತುಂಬನ್ನೂ ಹುಣಿಸೇಹಣ್ಣಿನ ನಾರು ವ ಬೀಜವನ್ನೂ ತೆಗದಿರಬೇಕು.

14. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನಾದರೂ ಕೊಟ್ಟಲ್ಲಾಗಲಿ ಮೈಸೂರ ಜೈಲ್ ಸೂಪರ್‌ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮಿಗದ ಬಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಒಬ್ಬರ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜುರ್ಮಾ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡಬಹುದು.

15. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು, ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಆಹಾರ ದರದ ಪಟ್ಟಿಯನ್ನೂ, ವ ಇತರ ತಪಶೀಲುಗಳನ್ನೂ, ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಪಡೆಯಬಹುದು ಹಾಲಿ ಮೈಸೂರು ಜೈಲ್‌ನಲ್ಲಿ 300 ಮಂದಿ ಖೈದೀರಿರುತ್ತಾರೆ ಈ ಸಾಲ್‌ನಲ್ಲಿ ಸುಮಾರು 350 ಮಂದಿವರಿಗೂ ಹಾಸ್ತಿಯಾಗಬಹುದು.

ಪಿ. ಹೆಚ್. ಬ್ರೆರ್ಸ್, ಎಂ. ಬಿ., ಸೂ. ಮೈಸೂರ ಜೈಲ್.